# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 543 |
| ಸದಸ್ಯರ ಹೆಸರು | : | ಶ್ರೀ ಎಸ್. ಎಲ್ ಭೋಜೇಗೌಡ |
| ಉತ್ತರಿಸಬೇಕಾದ ದಿನಾಂಕ | : | 20.08.2026 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿ |

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅರ್ಕಾವತಿ ಬಡಾವಣೆ ಪ್ರಾರಂಭವಾಗಿದ್ದು, ಯಾವಾಗ; ಪ್ರಾರಂಭದಲ್ಲಿ ಎಷ್ಟು ನಿವೇಶನಗಳಿಗೆ ಸರ್ಕಾರದಿಂದ ಆದೇಶಿಸಲಾಯಿತು; ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಯಾವಾಗ ಹಂಚಿಕೆ ಮಾಡಲಾಯಿತು; (ಸಂಪೂರ್ಣ ಮಾಹಿತಿ ನೀಡುವುದು) | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅರ್ಕಾವತಿ ಬಡಾವಣೆ ರಚನೆಗಾಗಿ ಒಟ್ಟು 3839 ಎಕರೆ 12 ಗುಂಟೆ ಜಮೀನಿನನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ: 03/02/2003 ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br>• ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/193/ ಎಂಎನ್‌ಎಕ್ಸ್/ 2004, ದಿನಾಂಕ: 23/02/2004ರಲ್ಲಿ 2750-00 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br>• ನಂತರ, ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ /426/ ಎಂಎನ್‌ಜೆ/ 2011, ದಿನಾಂಕ: 18/06/2014 ರಲ್ಲಿ 1766 ಎಕರೆ 07 ಗುಂಟೆ ಜಮೀನಿಗೆ ಪರಿಷ್ಕೃತ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br>• ಅರ್ಕಾವತಿ ಬಡಾವಣೆಯಲ್ಲಿ ಮೊದಲಿಗೆ 20000 ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿತ್ತು. ನಂತರ 2006ರಲ್ಲಿ ಒಟ್ಟು 8711 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. |
| (ಆ) | ನಿವೇಶನ ಹಂಚಿಕೆ ಮಾಡಿದವರಿಂದ ಎಷ್ಟು ಹಣ ಪಡೆಯಲಾಗಿದೆ; ನಿವೇಶನ ಹಂಚಿಕೆ ಮಾಡಿದವರಲ್ಲಿ ಎಷ್ಟು ಜನರಿಗೆ ನೋಂದಣಿ ಮಾಡಿಕೊಡಲಾಗಿದೆ ಇನ್ನೂ ನೋಂದಣಿಯಾಗದವರ ಸಂಖ್ಯೆ ಎಷ್ಟು ಈ ಪ್ರಕ್ರಿಯೆ ವಿಳಂಬವಾಗಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅರ್ಕಾವತಿ ಬಡಾವಣೆಯ ವಿವಿಧ ಅಳತೆಯ ನಿವೇಶನಗಳಿಗೆ ನಿಗದಿಪಡಿಸಲಾಗಿದ್ದ ದರಗಳ ವಿವರ ಕೆಳಕಂಡಂತಿದೆ<br><br>ನಿವೇಶನದ ವಿಸ್ತೀರ್ಣ (ಮೀ. ಗಳಲ್ಲಿ) — ನಿಗದಿಪಡಿಸಿರುವ ದರ (ರೂ.ಗಳಲ್ಲಿ)<br>6x9 ಮೀ (General) — 1,13,900/-<br>6x9 ಮೀ (EWS) — 56,700/-<br>9x12 ಮೀ — 2,27,300/-<br>12x18 ಮೀ — 4,54,600/-<br>15x24 ಮೀ — 7,58,500/-<br><br>• ನಿವೇಶನಗಳ ಹಂಚಿಕೆಯಿಂದ ರೂ.225.02 ಕೋಟಿ ಸಂಗ್ರಹವಾಗಿರುತ್ತದೆ. |

| | | |
|---|---|---|
| | | • ಅರ್ಕಾವತಿ ಬಡಾವಣೆಯಲ್ಲಿ ಒಟ್ಟು 3976 ಹಂಚಿಕೆದಾರರುಗಳಿಗೆ ನಿವೇಶನ ನೋಂದಣಿ ಮಾಡಲಾಗಿದ್ದು, 1119 ಹಂಚಿಕೆದಾರರುಗಳಿಗೆ ನಿವೇಶನ ನೋಂದಣಿಯಾಗಿರುವುದಿಲ್ಲ.<br>• ಅರ್ಕಾವತಿ ಬಡಾವಣೆಯ ಭೂಮಾಲೀಕರು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿರುವುದರಿಂದ ಹಾಗೂ ಜಸ್ಟೀಸ್ ಕೆ.ಎನ್.ಕೇಶವನಾರಾಯಣ ಸಮಿತಿಯಲ್ಲಿ ಹಲವು ಪ್ರಕರಣಗಳು ವಿಚಾರಣೆ ಹಂತದಲ್ಲಿರುವುದರಿಂದ, ನಿವೇಶನ ನೋಂದಣಿ ಕಾರ್ಯವು ವಿಳಂಬವಾಗಿರುತ್ತದೆ. |
| (ಇ) | ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ಡಿ-ನೋಟಿಫಿಕೇಷನ್ ಮತ್ತು ರೀ-ಡೂ ಪ್ರಕರಣಗಳಡಿಯಲ್ಲಿ ಒಟ್ಟು 983ಎಕರೆ 33ಗುಂಟೆ ಜಮೀನನ್ನು ಭೂಸ್ವಾಧೀನದಿಂದ ಹೊರತುಪಡಿಸಲು ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಯುಡಿಡಿ/ 193/ ಎಂಎನ್ಎಕ್ಸ್/ 2004, ದಿನಾಂಕ: 23/02/2004 ರನ್ವಯ 2750 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಪೈಕಿ ಕೆಳಕಂಡ ಅಂಶಗಳನ್ವಯ ಒಟ್ಟು 983 ಎಕರೆ 33 ಗುಂಟೆ ಜಮೀನನ್ನು 2014ರ ಪರಿಷ್ಕೃತ ಅಂತಿಮ ಅಧಿಸೂಚನೆಯಲ್ಲಿ ಭೂಸ್ವಾಧೀನದಿಂದ ಹೊರತುಪಡಿಸಲಾಗಿರುತ್ತದೆ.<br>1. ಮಾನ್ಯ ಉಚ್ಚ ನ್ಯಾಯಾಲಯವು ವಿವಿಧ ಪ್ರಕರಣಗಳಲ್ಲಿ ಒಟ್ಟು 83 ಎಕರೆ 08 ಗುಂಟೆ ಜಮೀನಿನ ಅಧಿಸೂಚನೆಯನ್ನು ರದ್ದುಪಡಿಸಿರುತ್ತದೆ.<br>2. ಭೂಸ್ವಾಧೀನ ಕಾಯ್ದೆ 1894 ಕಲಂ 48(1) ರನ್ವಯ ಒಟ್ಟು 198 ಎಕರೆ 20 ಗುಂಟೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಡಲಾಗಿರುತ್ತದೆ.<br>3. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ: 2624-2625/2005 ರ ದಿನಾಂಕ: 25/11/2005ರ ಆದೇಶ ಮತ್ತು ರಿಟ್ ಅರ್ಜಿ ಸಂಖ್ಯೆ: 9232/2006ರ ದಿನಾಂಕ: 23/08/2006 ರ ಆದೇಶ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ S.L.P.No. 4097/2010ರ ದಿನಾಂಕ: 05.05.2010ರ ಆದೇಶಗಳ ಮಾರ್ಗಸೂಚಿಗಳ ಹಿನ್ನಲೆಯಲ್ಲಿ ಒಟ್ಟು 702 ಎಕರೆ 05 ಗುಂಟೆ ಜಮೀನನ್ನು ಪರಿಷ್ಕೃತ ಅಂತಿಮ ಅಧಿಸೂಚನೆಯಿಂದ ಹೊರತುಪಡಿಸಲಾಗಿರುತ್ತದೆ. |
| (ಈ) | ಅರ್ಕಾವತಿ ಬಡಾವಣೆಯಲ್ಲಿ ಹಂಚಿಕೆಯಾದ ನಿವೇಶನದಾರರುಗಳಿಗೆ ನಾಡಪ್ರಭು ಕೆಂಪೇಗೌಡ ಬಡಾವಣೆ ಬದಲಿ ನಿವೇಶನ ಹಂಚಿಕೆ ಮಾಡಲಾಗಿರುವುದು ಯಾವ ಉದ್ದೇಶಕ್ಕಾಗಿ ಈವರೆಗೂ ಎಷ್ಟು ನಿವೇಶನವನ್ನು ಹಂಚಿಕೆ ಮಾಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಅರ್ಕಾವತಿ ಬಡಾವಣೆ ನಿವೇಶನ ಹಂಚಿಕೆದಾರರಿಗೆ ಹಂಚಿಕೆ ಮಾಡಲು ಅಗತ್ಯ ನಿವೇಶನಗಳ ಕೊರತೆ ಉದ್ಭವಿಸಿದ್ದರಿಂದ, ನಿವೇಶನ ಹಂಚಿಕೆದಾರರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಈವರೆಗೂ ಒಟ್ಟು 3090 ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. |

ಸಂಖ್ಯೆ: ನಅಇ 275 ಎಂಎನ್ಎಕ್ಸ್ 2026

(ಡಿ.ಕೆ.ಶಿವಕುಮಾರ್)
ಮುಖ್ಯಮಂತ್ರಿ